# ಕರ್ನಾಟಕ ಜಾನಪದ ವಿಶ್ವವಿದ್ಯಾಲಯ

ಗೊಟಗೋಡಿ, ರಾಷ್ಟ್ರೀಯ ಹೆದ್ದಾರಿ –4, ಶಿಗ್ಗಾವಿ ತಾ. ಹಾವೇರಿ ಜಿ. – 581 197

ಕುಲಸಚಿವರು (ಮೌಲ್ಯಮಾಪನ) ದಿನಾಂಕ: 30.03.2016

## ಸುತ್ತೋಲೆ

ಕರ್ನಾಟಕ ಜಾನಪದ ವಿಶ್ವವಿದ್ಯಾಲಯದ 2015–16ನೇ ಸಾಲಿನಲ್ಲಿ ಸರ್ಟಿಫಿಕೇಟ್ ಹಾಗೂ ಪಿ.ಜಿ. ಡಿಪ್ಲೋಮಾ ಕೋರ್ಸ್‌ಗಳ ವಾರ್ಷಿಕ ಪರೀಕ್ಷೆಗಳು ಮೇ ಮೂರನೇ ವಾರದಲ್ಲಿ ನಡೆಯಲಿವೆ. ಈ ಸಂಬಂಧ ಸರ್ಟಿಫಿಕೇಟ್ ಹಾಗೂ ಪಿ.ಜಿ. ಡಿಪ್ಲೋಮಾ ಕೋರ್ಸ್‌ಗಳ ವಾರ್ಷಿಕ ಪರೀಕ್ಷೆಗೆ ಹಾಜರಾಗುವ ವಿದ್ಯಾರ್ಥಿಗಳು ಪರೀಕ್ಷಾ ಶುಲ್ಕವನ್ನು ಪಾವತಿಸಿ ಅಗತ್ಯ ದಾಖಲೆಗಳೊಂದಿಗೆ ಪರೀಕ್ಷಾ ಅರ್ಜಿಯನ್ನು ಸಲ್ಲಿಸುವುದು. ಪರೀಕ್ಷಾ ಅರ್ಜಿಯನ್ನು **ದಿನಾಂಕ ಮಾರ್ಚ್ 31, 2016 ರಿಂದ ಎಪ್ರಿಲ್ 15, 2016 (ದಂಡ ರಹಿತ) ರೊಳಗೆ** ಮತ್ತು ದಿನಾಂಕ **ಎಪ್ರಿಲ್ 16 ರಿಂದ ಎಪ್ರಿಲ್ 26, 2016 ರೊಳಗೆ 200/– ರೂ** ದಂಡ ಶುಲ್ಕದೊಂದಿಗೆ ಮೌಲ್ಯಮಾಪನ ವಿಭಾಗಕ್ಕೆ ಸಲ್ಲಿಸಲು ಈ ಮೂಲಕ ಸೂಚಿಸಲಾಗಿದೆ.

ವಿಶ್ವವಿದ್ಯಾಲಯದ ಅಧ್ಯಯನ ಕೇಂದ್ರಗಳು ಮತ್ತು ಮಾನ್ಯತಾ ಸಂಸ್ಥೆಗಳು ಪರೀಕ್ಷಾ ಅರ್ಜಿಯನ್ನು ಕುಲಸಚಿವರು (ಮೌಲ್ಯಮಾಪನ) ವಿಭಾಗಕ್ಕೆ ಸಲ್ಲಿಸುವ ಕೊನೆಯ ದಿನಾಂಕ ಎಪ್ರಿಲ್ 30, 2016 ಆಗಿರುತ್ತದೆ. ಮಾನ್ಯತಾ ಸಂಸ್ಥೆಗಳು ನಂತರ ತರುವ ಪರೀಕ್ಷಾ ಅರ್ಜಿಗಳಿಗೆ ವಾರಕ್ಕೆ 500/– ರೂ. ಗಳ ದಂಡ ಶುಲ್ಕ ಪಾವತಿಸಬಾಕಾಗುತ್ತದೆ.

ಸೂಚನೆ:

1. ಪರೀಕ್ಷಾ ಅರ್ಜಿಯನ್ನು ಗ್ರಂಥಾಲಯದಲ್ಲಿ ಪಡೆಯುವುದು.
2. ಪರೀಕ್ಷಾ ಶುಲ್ಕ 860/– ರೂ. ಪ.ಜಾ/ಪ.ಪಂ. ಹಾಗೂ ಹಿಂದೂಳಿದ ವಿದ್ಯಾರ್ಥಿಗಳಿಗೆ 160/– ರೂ.
3. ಪರೀಕ್ಷಾ ಅರ್ಜಿಯೊಂದಿಗೆ ಎಸ್.ಎಸ್.ಎಲ್.ಸಿ. ಅಂಕಪಟ್ಟಿ ನಕಲು ಪ್ರತಿ ಜಾತಿ ಮತ್ತು ಆದಾಯ ಪ್ರಮಾಣ ಪತ್ರ ಲಗತ್ತಿಸುವುದು
4. ಅನುತ್ತೀರ್ಣ ಹೊಂದಿದ ವಿದ್ಯಾರ್ಥಿಗಳ ಪರೀಕ್ಷಾ ಶುಲ್ಕ (ಒಂದು ವಿಷಯಕ್ಕೆ) 375/– ರೂ.
5. ಪರೀಕ್ಷಾ ವೇಳಾಪಟ್ಟಿಯನ್ನು ಎಪ್ರಿಲ್ ಕೊನೆಯ ವಾರದಲ್ಲಿ ತಿಳಿಸಲಾಗುತ್ತದೆ.

31/3/2016

ಕುಲಸಚಿವರು(ಮೌಲ್ಯಮಾಪನ)